(ಸಾಕ್ಷಿದಾರರು ಸಂಪೂರ್ಣವಾಗಿ ಕೊಂಕಣಿ ಭಾಷೆ ಮಾತನಾಡುವವರಾಗಿದ್ದು, ಆದ್ದರಿಂದ ಈ ನ್ಯಾಯಾಲಯದ ವಕೀಲರಾಗಿರುವ ಶ್ರೀಮತಿ ಎಸ್.ಆರ್.ಜಿ. ವಕೀಲರನ್ನು ಸಾಕ್ಷಿದಾರರು ಕೊಂಕಣಿ ಭಾಷೆಯಲ್ಲಿ ಹೇಳುವ ವಿಷಯವನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಿ ನ್ಯಾಯಾಲಯಕ್ಕೆ ತಿಳಿಸಲು ನೇಮಿಸಿಕೊಳ್ಳಲಾಯಿತು. ಶ್ರೀಮತಿ ಎಸ್.ಆರ್.ಜಿ. ವಕೀಲರು ತಮಗೆ ಕೊಂಕಣಿ ಮತ್ತು ಕನ್ನಡ ಭಾಷೆ ಗೊತ್ತಿರುವುದಾಗಿ ತಿಳಿಸಿರುತ್ತಾರೆ.. ಶ್ರೀಮತಿ ಎಸ್.ಆರ್.ಜಿ. ವಕೀಲರಿಗೆ ಪ್ರಮಾಣವಚನ ಬೋಧಿಸಲಾಯಿತು.)

(ಇಂದು ದಿನಾಂಕ 04-04-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ಎದುರುದಾರರ ಪರ ಶ್ರೀ ವಿ.ಎ.ಟಿ. ವಕೀಲರಿಂದ–**

ನಾನು ಗೌಂಡಿ ಕೆಲಸವನ್ನು ಮೂಡಗೇರಿಯಲ್ಲಿ ಮಾಡುತ್ತೇನೆ. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ. ನನಗೆ ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ಅರ್ಜಿದಾರರು

ಕರೆದಿರುತ್ತಾರೆ. ನಾನು ರಿಪೇರಿ ಮಾಡಿದ್ದೇನೆ ಎಂದು ಹೇಳುವ ಮನೆ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಮಾಹಿತಿ ಇಲ್ಲ. ಯಾರು ಮಾಲಿಕರು ಆಗಿರುತ್ತಾರೆ ಅವರು ರಿಪೇರಿ ಮಾಡಲು ಹೇಳಿದರೆ ಮಾತ್ರ ನನಗೆ ರಿಪೇರಿ ಮಾಡುವ ಅಧಿಕಾರ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅರ್ಜಿದಾರರು ರಿಪೇರಿ ಮಾಡಲು ಹೇಳಿರುವುದರಿಂದ ಮಾಡಿರುತ್ತೇನೆ ಎನ್ನುವರು. ಅರ್ಜಿದಾರರು ಮಾಲಿಕರು ಹೌದೋ ಅಲ್ಲವೋ ಎಂದು ನಾನು ಚೌಕಶಿ ಮಾಡಿಲ್ಲ. ನಾನು ರಿಪೇರಿ ಮಾಡಿದ್ದೇನೆ ಎಂದು ಹೇಳುವ ಮನೆ ಕರ್ಕಿ ಕುಟುಂಬಕ್ಕೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ನಾನು ಸುಮಾರು 30 ವರ್ಷಗಳಿಂದ ಕೆಲಸ ಮಾಡಿದ್ದು ಏನೇನು ಕೆಲಸ ಮಾಡಿದ್ದೆ ಹಾಗೂ ಎಷ್ಟೆಷ್ಟು ಹಣ ಪಡೆದಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಏನೇನು ರಿಪೇರಿ ಮಾಡಬೇಕು ಎಂದು ನನಗೆ ಮಾಲಿಕರು ಹೇಳಿರುವುದಿಲ್ಲ. ಮನೆ ಮಾಲಿಕರು ನನಗೆ ರಿಪೇರಿ ಮಾಡಲು ಕರೆದಿಲ್ಲ ಹಾಗೂ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ರಿಪೇರಿ ಮಾಡಿದ ಹಣವನ್ನು ನನಗೆ ನಗದು ರೂಪದಲ್ಲಿ ಕೊಟ್ಟಿದ್ದರು. ಎಷ್ಟು ನಗದು ಹಣ ಪಡೆದಿದ್ದೇನೆ ಹಾಗೂ ಏನು ರಿಪೇರಿ ಕೆಲಸ ಮಾಡಿದ್ದೇನೆ ಎಂದು ನನ್ನ ಪ್ರಮಾಣಪತ್ರದಲ್ಲಿ ಬರೆದಿಲ್ಲ. ನನಗೆ ಅರ್ಜಿದಾರರು ಮನೆ ರಿಪೇರಿ ಕೆಲಸಕ್ಕೆ ಕರೆದಿದ್ದು ನಾನು ರಿಪೇರಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 30 ವರ್ಷಗಳ ಹಿಂದಿನಿಂದ ರಿಪೇರಿ ಕೆಲಸ ಮಾಡುತ್ತ ಬಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿ ಮನೆಯನ್ನು ನಾನು ರಿಪೇರಿ ಮಾಡಿಲ್ಲ ಹಾಗೂ ಪ್ರಮಾಣಪತ್ರದಲ್ಲಿ ನಮೂದಿಸಿದ ಇಸ್ವಿಯ ಪ್ರಕಾರ ಯಾವತ್ತೂ ನಾನು ರಿಪೇರಿಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ರಿಪೇರಿ ಮಾಡದೇ ಇರುವ ಕಾರಣ ನಾನು ಎಷ್ಟು ಹಣ ಪಡೆದಿದ್ದೇನೆ ಎಂದು ಪ್ರಮಾಣಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ಬೇರೆ ಮನೆಗೆ ರಿಪೇರಿ ಮಾಡಿದ್ದು ದಾವಾಸ್ತಿಯಲ್ಲಿರುವ ಮನೆಯಲ್ಲಿ ಯಾವತ್ತೂ ರಿಪೇರಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು

ಗೌಂಡಿ ಕೆಲಸ ಮಾಡುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದರೆ ಸರಿ ಹಾಗೂ ನಾನು ಗೌಂಡಿ ಕೆಲಸ ಮಾಡುತ್ತೇನೆ ಎಂದು ತೋರಿಸಲು ಯಾವುದೇ ದಾಖ್ಲೆ ಹಾಜರು ಮಾಡಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ